ಆಧ್ಯಾತ್ಮಿಕ ಆಶಾಕಿರಣಗಳು – ಭಾಗ – ೨

ಪ್ರಕೃತ ಪ್ರಸಕ್ತವಾದ ಶ್ರೀಹರಿಯನ್ನು ಸಂತೋಷ ಪಡಿಸುವ ವಿಧಾನದ ವಿಷಯವನ್ನೇ, ವಿಷ್ಣುರಹಸ್ಯವು ಅಧಿಕ ವಿವರಣೆಯನ್ನು ಕೊಟ್ಟು ಸಾಧಕನ ಮನಸ್ಸಿಗೆ ಸ್ಥೈರ್ಯವನ್ನು ತಂದು ಕೊಡುತ್ತದೆ. ಇದರಲ್ಲಿ ಮೊದಲಿನ ೧೬ ಅಧ್ಯಾಯಗಳು ಚತುರ್ಮುಖ ಬ್ರಹ್ಮ ದೇವರ – ಹಯಗ್ರೀವ ದೇವರ ಸಂವಾದ ರೂಪವಾಗಿವೆ. ಬ್ರಹ್ಮ ದೇವರು ಮುಮುಕ್ಷುಗಳಲ್ಲಿ ಹಿರಿಯರು. ಅವರೇ ಸಕಲರ ಪರವಾಗಿ ಅನೇಕ ಪ್ರಶ್ನೆಗಳನ್ನು ಕೇಳಿ ಸಾಕ್ಷಾತ್ ಭಗವಂತನಿಂದ ಉತ್ತರ ಪಡೆದಿದ್ದಾರೆ. ಅಧಿಕಾರಿಗಳಿಗೆ ಬೇಕಾದ ಕೆಲವು ರಹಸ್ಯ ವಿಷಯಗಳು ಇಲ್ಲಿ ಉಕ್ತವಾಗಿವೆ.

ವಿಷ್ಣುವಿನ ಪೂಜಾದಿಗಳನ್ನು ಹೇಗೆ ಮಾಡಬೇಕೆಂಬ ವಿಷಯದಲ್ಲಿ ಈ ಗ್ರಂಥವು ಇನ್ನು ಮುಂದೆ ಹೇಳಲ್ಪಡುವ ವಿವರಣೆಗಳನ್ನು ತಿಳಿಸಿ ಕೊಡುತ್ತದೆ. ಆರಾಧನೆಗೆ ಮಂತ್ರ ತಂತ್ರಗಳ ವಿಷಯ:

ಶ್ರೀ ಹಯಗ್ರೀವ ಉವಾಚ:

"ಸರ್ವರೂಪ ಸ್ತುತಿ ಪರಾಃ ಸರ್ವೇ ವೇದಾಹಿ ಮುಖ್ಯತಃ ।
ಅವ್ಹಾನ ತತ್ಪರಾಣ್ಯಾಹುಃ ಸರ್ವ ತಂತ್ರಾಣಿ ಮುಖ್ಯತಃ
॥ ೭.೩ ॥
ವೇದಾ ಶ್ರುಸ್ತಯ ಇತ್ಯುಕ್ತಾತಂತ್ರಾಣಿ ಸ್ಮೃತಯಸ್ತ್ವಿತಿ ।
ಶ್ರುತಿ ಸ್ಮೃತಿ ಉಭೇನೇತ್ರೇ ವಿಪ್ರಾಣಾಂಪರಿ ಕೀರ್ತಿತೆ
॥ ೭.೪ ॥

ಏಕೇನ ಹೀನಃ ಕಾಣಃ ಸ್ಯಾತ್ ದ್ವಾಭ್ಯಾಂ ಅಂಧಃ ಪ್ರಕೀರ್ತಿತಃ ।
ಅತೋ಼ ವಿಪ್ರೇಣ ಕರ್ತವ್ಯಂ ಶೀಲನಂ ವೇದ ತಂತ್ರಯೋ಼
॥ ೭.೫ ॥

(ವಿಷ್ಣು ರಹಸ್ಯ
)

"ಎಲ್ಲ ವೇದಗಳೂ ಮುಖ್ಯವಾಗಿ ನನ್ನ ಸ್ವರೂಪಗಳನ್ನೇ (ಮಹಿಮೆಗಳನ್ನೇ) ಸ್ತುತಿಸುತ್ತವೆ. ಸಕಲ ತಂತ್ರಗಳೂ ಮುಖ್ಯವಾಗಿ ನಾನು ಪೂಜಾರ್ಥವಾಗಿ ಪ್ರತಿಮಾಗಳಲ್ಲಿ ಬರಲು ನನ್ನನ್ನು ಅವ್ಹಾನಿಸುವ ವಿಧಿ ವಿಧಾನಗಳನ್ನು ತಿಳಿಸುವ ತಾತ್ಪರ್ಯ ಉಳ್ಳವುಗಳೇ ಆಗಿರುತ್ತವೆ. ವೇದಗಳು ಶೃತಿಗಳೆಂದೂ, ತಂತ್ರಗಳು ಸ್ಮೃತಿಗಳೆಂದೂ ಕರೆಯಲ್ಪಡುತ್ತವೆ. ಶೃತಿ ಸ್ಮೃತಿಗಳೆರಡೂ ಅಧ್ಯಯನ ಮಾಡಿದ ಸುಸಂಸ್ಕೃತನಿಗೆ ಎರಡು ಕಣ್ಣುಗಳಿದ್ದಂತೆ. ಅದರಲ್ಲಿ ಒಂದು ಕಣ್ಣಿಲ್ಲದವನು ಒಕ್ಕಣ್ಣನು. ಎರಡು ಕಣ್ಣಿಲ್ಲದವನು ಕುರುಡನೆಂದೂ ಜ್ಞಾನಿಗಳು ಕರೆಯುತ್ತಾರೆ. ಆದ್ದರಿಂದ ವಿಪ್ರನು ವೇದ ಮತ್ತು ತಂತ್ರಗಳ ಅಧ್ಯಯನ ಅನುಷ್ಠಾನಗಳಲ್ಲಿ ಆಸಕ್ತನಾಗಿರಬೇಕಾದುದು ಅವಶ್ಯಕರ್ತವ್ಯವಾಗಿದೆ."

ಅಧಿಕಾರಿಗಳಲ್ಲಿ ಮೂರು ತರಹದ ಜನರಿದ್ದಾರೆ. ಸಾತ್ವಿಕ, ರಾಜಸ ಮತ್ತು ತಾಮಸರೆಂದು.

"ಬ್ರಾಹ್ಮಣಾದ್ಯಾಶ್ಚ ಸರ್ವೇಽಪಿ ಸಂಸಾರಾದ್ಯೈ ಮುಮುಕ್ಷವಃ ।
ತೇತು ತಂತ್ರಂ ಪಂಚರಾತ್ರ ಮಾಶ್ರಯೇಯುರ್ನಚೇತರತ್ ॥
೭-೨೫ ॥ (ವಿ.ರ.)

"ಬ್ರಾಹ್ಮಣಾದಿ (ವೇದಾಧಿಕಾರಿಗಳಾದ ಇತರ ವರ್ಣಗಳೂ)

ವರ್ಣಗಳಲ್ಲಿ ಜನಿಸಿದ ಸಾತ್ವಿಕ ಜೀವರು, ಮೋಕ್ಷಾಪೇಕ್ಷೆಯುಳ್ಳವರಾಗಿ ಪಂಚರಾತ್ರಾಗಮವನ್ನು ಆಶ್ರಯಿಸುತ್ತಾರೆ. ಇತರ ಪಾಶುಪತಾದಿ ಆಗಮಗಳನ್ನು ಆಶ್ರಯಿಸುವುದಿಲ್ಲ."

ವಿದ್ಯೆ, ಐಶ್ವರ್ಯ, ಧನ ಇತ್ಯಾದಿ ಐಹಿಕ ಫಲಗಳಿಗಾಗಿ ಶಾಕ್ತ, ಗಾಣಪತ್ಯ, ಸೌರ ಇತ್ಯಾದಿಗಳನ್ನು ಅಶ್ರಯಿಸುವವರು ರಾಜಸರು.

ಪರಸ್ತ್ರೀ, ಪರದ್ರವ್ಯ, ಪರವಶೀಕರಣ, ಪರರನಾಶಾದಿಗಳನ್ನು ಮಾಡಲಿಚ್ಛಿಸುವವರು ಅಂಥ ಕ್ಷುದ್ರದೇವತೆಗಳನ್ನಾಶ್ರಯಿಸಿ ತಮ್ಮ ಸಾಧನೆಯನ್ನು ಸ್ಮಶಾನಗಳಲ್ಲಿ ಸಾಧಿಸುತ್ತಾರೆ. ಇವರು ತಾಮಸರು. ಅಂತ್ಯದಲ್ಲಿ ಇವರಿಗೆ ನರಕವಾಸ ತಪ್ಪಿದ್ದಲ್ಲ.

ಈ ಸಂದರ್ಭದಲ್ಲಿ ಭಗವಂತನು ಸ್ವಯಂ ಹೀಗೆ ಹೇಳಿದ್ದಾನೆ –

"ಪಂಚರಾತ್ರಸ್ಯ ಕೃತಸ್ನಿಸ್ಯ ವಕ್ತಾಹಂ ಸ್ವಯಮೇವಹಿ"
॥ ೭–೩೨ ॥
"ಅತೋಹಿ ಸರ್ವಶಾಸ್ತ್ರೇಷು ವರಮೇತನ್ನಿಗದ್ಯತೆ"
॥ ೭–೩೩ ॥

"ಯದ್ಯಪಿ ಇತರ ಆಗಮಗಳು ನನ್ನ ಆಜ್ಞೆಯಿಂದ ರುದ್ರಾದಿಗಳಿಂದ ರಚಿಸಲ್ಪಟ್ಟಿದ್ದರೂ, ಸಮಗ್ರ ಪಂಚರಾತ್ರಾಗಮವನ್ನು ಮಾತ್ರ ನಾನೇ ರಚಿಸಿದ್ದೇನೆ. ಆದ್ದರಿಂದ ಇದು ಶ್ರೇಷ್ಠವೆಂದು ಜ್ಞಾನಿಗಳ ಮತ. ನನ್ನ ಭಕ್ತರಾದವರು ಇದನ್ನು ವಿಷ್ಣು ಭಕ್ತರಿಗೆ ಮಾತ್ರ ಶ್ರವಣ ಮಾಡಿಸುತ್ತಾರೆ."

ಈ ಪ್ರಕಾರ ಆರಾಧನ ಮಾಡಿದ ಭಗವದ್ಭಕ್ತರು ಯಾರೆಂಬುದನ್ನು ತಿಳಿಸುತ್ತಾರೆ.

ಪ್ರಹ್ಲಾದ ಧ್ರುವ ಬಲ್ಯಾದ್ಯಾ ವಸಿಷ್ಠಾದ್ಯಾ ಮಹರ್ಷಯಃ
॥ ೭-೩೫ ॥

ಸ್ವಾಯಂಭುವಾದ್ಯಾ ಮನವೋ ಹ್ಯನ್ಯೆ ತದ್ವಂಶಜಾ ಸ್ತಥಾ ॥
ವಿಭೀಷಣಾದ್ಯಾ ಸರ್ವೇಽಪಿ ಬ್ರಹ್ಮರುದ್ರಾದಿ ದೇವತಾ ।
ಆರಾಧ್ಯ ಪಂಚರಾತ್ರೇಣ ವಿಧಿನಾಮಾಂ ಪ್ರಪೇದಿರೆ ॥
೭-೩೭ ॥

ಪ್ರಹ್ಲಾದ, ಧ್ರುವ, ಬಲಿ, ವಶಿಷ್ಠಾದಿ ಮಹರ್ಷಿಗಳು, ಸ್ವಾಯಂಭುವಮನು ಅವನ ವಂಶಜರು, ವಿಭೀಷಣಾದಿಗಳು, ಬ್ರಹ್ಮರುದ್ರಾದಿಗಳು ಪಂಚರಾತ್ರಾಗಮೋಕ್ತ ವಿಧಿ ವಿಧಾನಗಳಿಂದ ಆರಾಧನೆ ಮಾಡಿ ನನ್ನನ್ನು ಹೊಂದಿದ್ದಾರೆ.

ಮಂತ್ರ ತಂತ್ರಾದಿಗಳಿಂದ ವಿಷ್ಣುವನ್ನು ವಿಧ್ಯುಕ್ತವಾಗಿ ಆರಾಧಿಸಲು ವಿಷ್ಣು ದೀಕ್ಷೆ ಪಡೆಯುವುದು ಅವಶ್ಯಕ. ಸುಮ್ಮನೆ ಪುಸ್ತಕ ಓದಿ ಮಾಡಿದರೆ ಸಾಲದು ಎನ್ನುತ್ತಾರೆ.

"ಉಪನೀ ತಾ ದ್ವಿಜಾಃ ಸರ್ವೇ ವೇದೇಷ್ವಧಿಕೃತಾಮತಾಃ ।
ತಂತ್ರೇಷು ದೀಕ್ಷಿತಾ ಏವ ಪ್ರೋಚ್ಯಂತೇ ಹ್ಯಧಿ ಕಾರಿಣಃ
॥ ೭-೩೮ ॥

"ಉಪನಯನ ಸಂಸ್ಕಾರವು ಹೇಗೆ ದ್ವಿಜರಿಗೆ

ವೇದಾಧಿಕಾರವನ್ನು ದೊರಕಿಸಿ ಕೊಡುತ್ತದೆಯೋ, ಹಾಗೆಯೇ ತಂತ್ರೋಕ್ತ ಪೂಜಾದಿ ಕರ್ಮಾನುಷ್ಠಾನ ವಿಷಯಗಳಲ್ಲಿ ವಿಧಿ ಪೂರ್ವಕ ವಿಷ್ಣು ದೀಕ್ಷೆಯನ್ನು ಪಡೆಯುವವರು ಮಾತ್ರ ಅಧಿಕಾರಿಗಳಾಗುತ್ತಾರೆ."

ವಿಷ್ಣುದೀಕ್ಷಾ ವಿಷಯದಲ್ಲಿ ವಿಶೇಷ ವಿವರಣೆ ಕೊಡುತ್ತಾರೆ.

"ದೀಕ್ಷಾಹಿ ದ್ವಿವಿಧಾ ಪ್ರೋಕ್ತಾ ಬಾಹ್ಯಾ ಭ್ಯಾಂತರ ಭೇದತಃ ।
ಜ್ಞಾನಿನಾಂ ಉಭಯಂ ತತ್ರ ಬಾಹ್ಯೋವಾಜ್ಞಾನಿನಾಂ ಭವೇತ್" ॥

(ವಿ.ರ.) ॥ ೭-೩೯ ॥

"ಬಾಹ್ಯದೀಕ್ಷೆ ಅಂತರ್ದೀಕ್ಷೆ ಎಂದು ದೀಕ್ಷೆಯು ಎರಡು ವಿಧವಾಗಿದೆ. ಅದರಲ್ಲಿ ಜ್ಞಾನಿಗಳಿಗೆ ಎರಡೂ ವಿಹಿತ. ಅಜ್ಞಾನಿಗಳಿಗೆ ಬಾಹ್ಯದೀಕ್ಷೆ ಮಾತ್ರವೆಂದು ವಿಧಿಸಲಾಗಿದೆ."

ಮೊದಲು ಅಂತರ್ದೀಕ್ಷೆಯನ್ನು ನಿರೂಪಿಸಿದ್ದಾರೆ. –

"ಅಯಂ ಸರ್ವೇಷ್ಟ ದಾತಾಮೇ ಸರ್ವಾರಿಷ್ಟ ನಿವಾರಕಃ ।
ಸರ್ವೋತ್ಕೃಷ್ಟೋಯ ಮೇವೈಕ ಸ್ತದಿಯೋಹಂ ಸಮೇಪತಿಃ ॥೭-೪೦ ॥

ಇತಿ ಜ್ಞಾನಂ ನಿಶ್ಚಿತಂ ಯತ್ ಸಾದೀಕ್ಷಾಭ್ಯಂತರಂ ಮತಾ ।"

(ವಿ.ರ.)

"ಶ್ರೀ ವಿಷ್ಣುವೇ ನನಗೆ ಸಕಲ ಅನಿಷ್ಟ ನಿವೃತ್ತಿದ್ವಾರಾ

ಸರ್ವಾಭೀಷ್ಟದಾಯಕನು. ಆತನೊಬ್ಬನೇ ಸರ್ವೋತ್ಕೃಷ್ಟತಮನು, ಆತನಿಗೆ ಸಮರೂ ಅಧಿಕರೂ ಯಾವ ಕಾಲದಲ್ಲಿಯೂ ಇಲ್ಲವೇ ಇಲ್ಲ. ನಾನು ಅವನ ಪರಿವಾರದಲ್ಲೊಬ್ಬ ದಾಸ. ಆತನೇ ನನಗೆ ಸದಾ ಸ್ವಾಮಿಯು. ಇಂಥ ನಿಶ್ಚಿತ ದಾರ್ಢ್ಯ ಜ್ಞಾನವೇ ಅಂತರ್ದೀಕ್ಷೆ ಎನ್ನಿಸಿಕೊಳ್ಳುತ್ತದೆ."

ಬಾಹ್ಯದೀಕ್ಷೆಯ ವಿವರಣೆ ಹೀಗಿದೆ –

"ನಾಮ ಚಿಹ್ನಾದಿನಾದೇಹೆ ವಹ್ನಿ ನಾವಾ ಮೃದಂಕನಂ ॥ ೭–೪೧ ॥
ಸಾಬಾಹ್ಯಾ ಪ್ರೋಚ್ಯತೆ ದೀಕ್ಷಾ ಹ್ಯ ಜ್ಞಾನಾಂ ಜ್ಞಾನಿನಾಮಪಿ ॥" (ಪಿ.ರ.)

"ಶ್ರೀ ವಿಷ್ಣುವಿನ ವಿವಿಧ ನಾಮಗಳಿಂದ ಲೋಕ ವ್ಯವಹಾರಕ್ಕಾಗಿ ಕರೆಯಿಸಲ್ಪಡುವುದು. ಆತನ ಶಂಖ, ಚಕ್ರ, ಗದಾ, ಪದ್ಮ, ನಾರಾಯಣಾದಿ ಮುದ್ರೆಗಳನ್ನು ಕೆಲವು ಸಲ ತಪ್ತ ಮುದ್ರೆಗಳಿಂದಾಗಲಿ, ನಿತ್ಯದಲ್ಲಿ ಗೋಪೀಚಂದನಾದಿ ಮೃತ್ತಿಕೆಗಳಿಂದಾಗಲಿ ದೇಹದಲ್ಲಿ ಗುರುತಿಸಿಕೊಳ್ಳುವುದು. ಇದು ಬಾಹ್ಯ ದೀಕ್ಷೆಯು. ಬಾಹ್ಯ ದೀಕ್ಷೆಯು ಜ್ಞಾನಿ ಅಜ್ಞಾನಿ ಉಭಯತರಿಗೂ ವಿಹಿತವಾಗಿದೆ.

---------------------------------------